ಉಚಿತ ವೈ.ಫೈ ಸೌಲಭ್ಯ ಒದಗಿಸುವುದು

5084 (5682); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿ ಉಚಿತ ವೈ–ಫೈ ಸೌಲಭ್ಯವನ್ನು ಯಾವ ನಗರಕ್ಕೆ ನೀಡಲಾಗಿದೆ;

ಆ) ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೂ ಉಚಿತ ವೈ–ಫೈ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಉಚಿತ ವೈ–ಫೈ ಸೇವೆಯನ್ನು ಈ ಕೆಳಕಂಡ ನಗರದಲ್ಲಿ ಒದಗಿಸಲಾಗಿದೆ.

ಬೆಂಗಳೂರು, ಮೈಸೂರು ಹಾಗೂ ಬಾಗಲಕೋಟೆ

ಬೆಂಗಳೂರಿನಲ್ಲಿರುವ ಸ್ಥಳಗಳು:

1. ಎಂ.ಜಿ. ರೋಡ್
2. ಬ್ರಿಗೇಡ್ ರೋಡ್
3. ಶಾಂತಿನಗರ ಬಸ್ ನಿಲ್ದಾಣ
4. ಕೋರಮಂಗಲ ಬಸ್ ನಿಲ್ದಾಣ
5. ಯಶವಂತಪುರ ಬಸ್ ನಿಲ್ದಾಣ
6. ಸಿ.ಎಮ್.ಹೆಚ್. 100 Ft. ರೋಡ್ ಜಂಕ್ಷನ್
7. ಕೆಂಗೇರಿ ಟಿ.ಟಿ.ಎಮ್.ಸಿ
8. ಸ್ಯಾಟಲೈಟ್ ಬಸ್ ನಿಲ್ದಾಣ
9. ಶಿವಾಜಿನಗರ ಬಸ್ ನಿಲ್ದಾಣ
10. ಜಯನಗರ ಬಸ್ ನಿಲ್ದಾಣ

11. ಬನಶಂಕರಿ ಬಸ್ ನಿಲ್ದಾಣ

ಮೈಸೂರಿನಲ್ಲಿರುವ ಸ್ಥಳಗಳು:

1. ಸಿಟಿ ಬಸ್ ನಿಲ್ದಾಣ
2. ರೂರಲ್ ಬಸ್ ನಿಲ್ದಾಣ

ಬಾಗಲಕೋಟೆಯಲ್ಲಿರುವ ಸ್ಥಳಗಳು:

1. ಡಿ.ಸಿ. ಆಫೀಸ್
2. ವಿದ್ಯಾಗಿರಿ

(ಈ ಸೌಲಭ್ಯವನ್ನು ಪ್ರತಿ ಬಳಕೆದಾರ ಒಂದು ದಿನಕ್ಕೆ 3 ಗಂಟೆಗಳ ಕಾಲ ಅಥವಾ 50 MB ಡೌನ್‌ಲೋಡ್, ಯಾವುದು ಕಡಿಮೆಯೋ ಅದು, ಫೆಸಿಲಿಟಿಯೊಂದಿಗೆ ಬಳಕೆ ಮಾಡಬಹುದಾಗಿದೆ).

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಅಂಗವಿಕಲ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಅನುದಾನ

5086 (5860); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಅಂಗವಿಕಲರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳಿಗೆ ಸರ್ಕಾರ ನಿಗದಿಪಡಿಸಿರುವ ಹಾಗೂ ಬಿಡುಗಡೆ ಮಾಡಿರುವ ಮೊತ್ತವೆಷ್ಟು (ಯೋಜನಾವಾರು ವಿವರಗಳನ್ನು ನೀಡುವುದು);

ಆ) ಅಂಗವಿಕಲರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಅನುದಾನವನ್ನು ನೀಡುತ್ತಿದೆಯೇ;

ಇ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ಬಂದ ಅನುದಾನದ ಮೊತ್ತವೆಷ್ಟು (ವಿವರಗಳನ್ನು ಒದಗಿಸುವುದು);